# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
## ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 06(ಥಣಿಸಂದ್ರ)
### ವಾರ್ಡ್ ಸಮಿತಿ ಸಭೆ, ದಿನಾಂಕ: 05-02-2022 ರ ಸಭಾ ನಡುವಳಿ

ದಿನಾಂಕ: **05-02-2022** ರಂದು ಬೆಳ್ಳಿಗೆ **11.00** ಗಂಟೆಗೆ ವಾರ್ಡ್ ನಂ.06 ಥಣಿಸಂದ್ರ ವಾರ್ಡ್ ಸಮಿತಿಯ ಸಭೆಯನ್ನು ಶ್ರೀ ಬಿ. ರೆಡ್ಡಿಶಂಕರ್ ಬಾಬು, ವಿಶೇಷ ಆಯುಕ್ತರು, (ಆಸ್ತಿಗಳು) ರವರ ಹಾಗೂ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಗೂಗಲ್ ಮೀಟ್ ಆಪ್ ಮುಖಾಂತರ ವರ್ಚುವಲ್ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ಬಿ. ರೆಡ್ಡಿ ಶಂಕರ್ ಬಾಬು | ವಿಶೇಷ ಆಯುಕ್ತರು, (ಆಸ್ತಿಗಳು) ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ ನಂ 06(ಥಣಿಸಂದ್ರ) |
| 2 | ಶ್ರೀ ಸುರೇಶ ದೇವತರಾಜ್ | ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ, ವಾರ್ಡ್ ಸಮಿತಿ, ವಾರ್ಡ್ ನಂ 06(ಥಣಿಸಂದ್ರ) |
| 3 | ಶ್ರೀಮತಿ ಡಾ॥ ಅಲೀನಾ | ಆರೋಗ್ಯ ವೈಧ್ಯಾಧಿಕಾರಿಗಳು, ಪ್ರಾಥಮಿಕ್ ಆರೋಗ್ಯ ಕೇಂದ್ರ, ಥಣಿಸಂದ್ರ |
| 4 | ಶ್ರೀ ಕಿರಣ್ ಬಿ | ಸ.ಕಾ.ಅ , ಯೋಜನಾ ವಿಭಾಗ ಬಿಬಿಎಂಪಿ ಯಲಹಂಕ ವಲಯ |
| 5 | ಶ್ರೀ ಚಂದನ್ ಎಸ್. | ಸ.ಕಾ.ಅ, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ(110 ಹಳ್ಳಿ) |
| 6 | ಶ್ರೀ ರಾಜಶೇಖರ ಮೇಟಿ | ಸ.ಕಾ.ಅ, ಬಿ.ಡಬ್ಲ್ಯೂ.ಎಸ್.ಎಸ್.ಬಿ (ನಿರ್ವಹಣೆ) |
| 7 | ಶ್ರೀ ಸವೀತ | ಸ.ಕಾ.ಅ ವೈಟ್ ಟಾಪಿಂಗ್ ವಿಭಾಗ, ಬಿ.ಬಿ.ಎಂ.ಪಿ |
| 8 | ಶ್ರೀ ಬಾಬುರೆಡ್ಡಿ | ಸ.ಅ (ವಿದ್ಯುತ್), ಯಲಹಂಕ ವಿಭಾಗ |
| 9 | ವರುಣ್ ಕುಮಾರ್ | ಸ.ಅ, ರಸ್ತೆ ಮತ್ತು ಮೂ.ಭೂ.ಸೌಕರ್ಯ ಯಲಹಂಕ ವಲಯ |
| 10 | ಶ್ರೀ ನಂಜುಂನಡಪ್ಪ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 06 (ಥಣಿಸಂದ್ರ) |
| 11 | ಶ್ರೀ ಮಹೇಶ್ ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 06 (ಥಣಿಸಂದ್ರ) |

ಶ್ರೀ ಸುರೇಶ ದೇವತರಾಜ್ ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರ'ರು ವಾರ್ಡ್ ಸಮಿತಿಯ ಸಭೆಗೆ ಗೂಗಲ್ ಮೀಟ್ ಆಪ್ ಮುಖಾಂತರ ವರ್ಚುವಲ್ ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ದಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಸಮಿತಿಯ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡಾ ವಿಷಯದ ಬಗ್ಗೆ ತಿಳಿಸಿದರು.

**1. ಕೋವಿಡ್ -19 ಸೊಂಕು ಹರಡವುದನ್ನು ತಡೆಗಟ್ಟುವ ಬಗ್ಗೆ.**

ಶ್ರೀಮತಿ ಡಾ॥ ಅಲೀನಾ ಆರೋಗ್ಯ ವೈಧ್ಯಾಧಿಕಾರಿಗಳು, ಹೆಗಡೆನಗರ ಪ್ರಾಥಮಿಕ ಆರೋಗ್ಯ ಕೇಂದ್ರರವರು ಮಾತನಾಡಿ ವಾರ್ಡ್ ನಂ 06 ರಲ್ಲಿ ಮೊದಲನೆಯ ಡೋಸ್ ಶೇ 100 ಹಾಗೂ ಎರಡನೇಯ ಡೋಸ್ ಲಸಿಕೆ ಶೇ 90 ಜನರಿಗೆ ನೀಡಲಾಗಿದ್ದು, ಬೂಸ್ಟರ್ ಡೋಸ್ ಮುಂಚುಣಿ ಕಾರ್ಯಕರ್ತ ರವರಿಗೆ ನೀಡಲಾಗುತ್ತಿದ್ದು, 15ರಿಂದ 18 ವರ್ಷದ ಮಕ್ಕಳಿಗೆ ಸಹ ಲಸಿಕೆ ನೀಡುವ ಕಾರ್ಯ ನಡೆಯುತ್ತಿದೆ ಎಂದು ತಿಲಿಸಿದರು. 60 ವರ್ಷಕ್ಕಿಂತ ಮೇಲೆ ವಯಸ್ಸು ವಿರುವ

ಸಾರ್ವಜನಿಕರು ಬೂಸ್ಟರ್ ಡೋಸ್‌ನ್ನು ಎರಡನೇಯ ದೋಸ್ ಪಡೆದು 9 ತಿಂಗಳು ಪೂರ್ಣಗೊಂಡವರಿಗೆ ಕೋವಾಕ್ಸಿನ್ ಹಾಗೂ ಕೋವಿಶೀಲ್ಡ್ ಲಸಿಕೆ ನೀಡಲಾಗುತ್ತಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆಯಬೇಕಾಗಿ ಕೋರಿದರು. ಕೋರೊನಾ ಲಕ್ಷಣವಿರುವರಿಗೆ ಮಾತ್ರ ಟೆಸ್ಟಿಂಗ್ ಮಾಡಲಾಗುತ್ತಿದೆ ಎಂದು ತಿಳಿಸಿದರು.

2. **ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ**

- **ಶ್ರೀ ದಾಸಪ್ಪ ಹೆಗಡೆನಗರ ರವರು ಮತನಾಡಿ** ಹೆಗಡೆನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಹತ್ತಿರವಿರುವ ಬ್ಲಾಕ್ ಸ್ಪಾಟ್‌ಯಲ್ಲಿ ಪ್ರತಿ ದಿನ ಬಹಳಷ್ಟು ಘನತ್ಯಾಜ್ಯ ಬಿಳುತ್ತಿದ್ದು, ಸಕಾಲದಲ್ಲಿ ಘನತ್ಯಾಜ್ಯ ವಿಲೇವಾರಿ ಮಾಡುತ್ತಿರುವುದಿಲ್ಲ. ತರಕಾರಿ ಮಾರುವ ಅಂಗಡಿಗಳಿಂದ ಪ್ರತಿ ದಿನ ತ್ಯಾಜ್ಯ ತಂದು ಸುರಿಯುತ್ತಿದ್ದು ಅಂತಹರವರ ಮೇಲೆ ಕ್ರಮ ವಹಿಸಬೇಕಾಗಿ ಕೋರಿದರು. ಮಾರ್ಶಲ್‌ಗಳನ್ನು ನಿಯೋಜಿಸಿ ಈ ಸ್ಥಳದಲ್ಲಿ ಕಸಹಾಕದಂತೆ ಹಾಗೂ ಕಸ ಹಾಕುವವರನ್ನು ದಂಡ ವಿಧಿಸಬೇಕಾಗಿ ಹಾಗೂ ಎಲ್ಲಾ ತರಕಾರಿ ಅಂಗಡಿಗಳ ಮಾಲೀಕರಿಗೆ ನೋಟಿಸ್ಸು ನೀಡಲು ಕೋರಿದರು.
- **ಶ್ರೀನಿವಾಸರಾವ ಅಮರಜ್ಯೋತಿ** ನಗರ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲಾ ತರಹದ ವಾಣಿಜ್ಯ ಚಟುವಟಿಕೆ ನಡೆಸುವ ಅಂಗಡಿಗಳಲ್ಲಿ ಸಿಬ್ಬಂದಿಗಳು ಕಡ್ಡಾಯವಾಗಿ ಕರೋನಾ ಲಸಿಕೆ ಪಡೆದಿರುವ ಬಗ್ಗೆ ಕನ್ನಡದಲ್ಲಿ ಪ್ರದರ್ಶೀಸಬೇಕಾಗಿದ್ದು ಈ ಸಂಬಂದ ಹಿರಿಯ ಆರೋಗ್ಯ ಪರಿವೀಕ್ಷಕರು ಪರಿಶೀಲಿಸಿ ಕ್ರಮ ವಹಿಸಲು ಕೋರಿದರು.

3. **ಕುಡಿಯುವ ನೀರು ಸರಬರಾಜು ಮತ್ತು ನಿರ್ವಹಣೆ ಬಗ್ಗೆ** :

- **ಶ್ರೀ ಸುರೇಶ ದೇವತರಜ್ ಸ.ಅ** ರವರು ಮಾತನಾಡಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಕಾವೇರಿ ಕುಡಿಯುವ ನೀರನ ಟೆಸ್ಟಿಂಗ್ ಬಾಕಿವಿರವ ಕಾರಣ ರಸ್ತೆಗಳಿಗೆ ಡಮಬರಿಕರಣ ಕಾಮಗಾರಿ ಕೈಗೊಳ್ಳು ಸಾಧ್ಯವಾಗುತ್ತಿರುವುದಿಲ್ಲ ಎಂದು ತಿಳಿಸಿದರು.
- **ಶ್ರೀ ಚಂದನ ಸ.ಕಾ.ಅ** ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ಮಾತನಾಡಿ ಥಣಿಸಂದ್ರ ಮುಖ್ಯ ರಸ್ತೆಯಲ್ಲಿ ಎರಡು ಜಾಗದಲ್ಲಿ ಕಾವೇರಿ ನೀರಿನ ಪೈಪುಗಳಲ್ಲಿ ಸೋರಿಕೆಯಿದ್ದು, ಸದರಿ ಸ್ಥಳಗಳಲ್ಲಿ ಅಲ್ಟ್ರಾ ಸೌಂಡ್ ಟೆಸ್ಟಿಂಗ್ ಮುಖಾಂತರ ಗುರುತಿಸಲಾಗಿದ್ದು, ಸೊರಿಕೆಯನ್ನು ತಡೆಗಟ್ಟಲು ದುರಸ್ತಿಗಾಗಿ ಪೋಲೀಸ್ ಇಲಾಖೆಯಿಂದ ಅನುಮತಿ ನೀಡದೇ ಇರುವದರಿಂದ ದುರಸ್ತಿ ಕಾರ್ಯ ಮಾಡಲು ಸಾಧ್ಯವಾಗಿರುವುದಿಲ್ಲ ಹಾಗೂ ಇದರಿಂದಾಗಿ ಕಾವೇರಿ ನೀರಿನ ಟೆಸ್ಟಿಂಗ್ ಮಾಡಲು ವಿಳಂಬವಾಗಿರುತ್ತದೆ ಎಂದು ತಿಳಿಸಿದರು.
- **ಶ್ರೀನಿವಾಸರಾವ ಅಮರಜ್ಯೋತಿನಗರ ರವರು** ಮಾತನಾಡಿ ವಾರ್ಡ್ ನಂ 06 ರಲ್ಲಿ ಒಳಚರಂಡಿ ಕಾಮಗಾರಿ ಅಪೂರ್ಣವಾಗಿದ್ದು. ಎಸ್.ಟಿ.ಪಿ. ಮೇಲದರ್ಜೆ ಕಾರ್ಯ ನಡೆಯುತ್ತಿದೆ ಎಂದು ಸ.ಕಾ.ಅ ರವರು ತಿಳಿಸಿದ್ದು. ಈ ಸಂಬಂದ ಒಂದು ನಿಯೊಗದೊಂದಿಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಎಂ.ಡಿ. ರವರನ್ನು ಭೇಟಿ ಮಾಡಿ ವಾರ್ಡ್ ನಂ 06 (ಥಣಿಸಂದ್ರ) ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿರುವ ಒಳಚರಂಡಿ ಕಾಮಗಾರಿಯಲ್ಲಿನ ಸಮಸ್ಯಗಳ ಬಗ್ಗೆ ಚರ್ಚಿಸುವದು ಸೂಕ್ತ ಎಂದು ತಿಳಿಸಿದರು.
- **ವಾರ್ಡ್ ಅಭಿಯಂತರರು ಮಾತನಾಡಿ** ಕುಡಿಯುವ ನೀರನ ಅಭಾವವಿರುವ ಪ್ರದೇಶಗಳಾದ ಕಾವೇರಿ ಬಡಾವಣೆ, ಹೆಗಡೆನಗರದ ಪೂರ್ವ ಮತ್ತು ಪಶ್ಚಿಮ ಭಾಗದಲ್ಲಿ, ಪ್ರಶಾಂತಿನಗರ, ಶಬರಿನಗರ, ಥಣಿಸಂದ್ರ ಸರ್ಕಾರಿ ಶಾಲೆ ಹತ್ತಿರ ಸಾರಾಯಿಪಾಳ್ಯದಲ್ಲಿ ಈಗಾಗಲೇ 8-9 ಕೋಳವೆ ಬಾವಿಗಳನ್ನು ಕೊರಯಾಗಿದ್ದು ಶೀಘ್ರದಲ್ಲಿ ಪಂಪು ಮೋಟರಗಳನ್ನು ಅಳವಡಿಸಿ ಸಾರ್ವಜನಿಕರಿಗೆ ನೀರು ಸರಬರಜು ಮಾಡಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು.

4. **ವಾರ್ಡ್ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ** :

- ವಾರ್ಡ್ ಅಭಿಯಂತರರು ಮತನಾಡಿ ದಾಸರಹಳ್ಳಿ ಗ್ರಾಮದ ಮಾರುತಿ ಬಡಾವಣೆ 1 ರಿಂದ 14ಅಡ್ಡ ರಸ್ತೆಗ್ಗಳಲ್ಲಿ, ಸಾದೀಕ್ ಬಡಾವಣೆ ಮುಖ್ಯ ರಸ್ತೆ, ಭೂವನೇಶ್ವರಿನಗರದ 20ನೇ ಆರ್ ಕ್ರಾಸ್ ಮುಖ್ಯ ಮತ್ತು 5 ಅಡ್ಡರಸ್ತೆಗಳಿಗೆ ಡಾಂಬರೀಕರನ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ದಾಸರಹಳ್ಳಿ ಗ್ರಾಮದ ಮುನಿಕೆಂಪಣ್ಣ ಬಡಾವನೆ, ಡಿಫೇನ್ಸ್ ಬಡಾವಣೆ, ಕಾವೇರಿ ಬಡಾವಣೆಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

- ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಗಳ ಗುಂಡಿ ಮುಚ್ಚುವ ಕಾರ್ಯ ಪ್ರಗತಿಯಲ್ಲಿದ್ದು, ಈಗಾಗಲೇ ಎಮ್.ಎಸ್. ಸಾರಾಯಿಪಾಳ್ಯ ಮುಖ್ಯ ರಸ್ತೆ ಮತ್ತು ರಾಮಯ್ಯ ನಾರ್ಥ ಸಿಟಿ ಬಡಾವಣೆಯಲ್ಲಿ ಕೆಲವು ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚಲಾಗಿದೆ ಎಂದು ತಿಳಿಸಿದರು.

5. **ವಿದ್ಯೂತ್ ದೀಪಗಳ ನಿರ್ವಹಣೆ ಬಗ್ಗೆ**

- ಬಿ.ಬಿ.ಎಂ.ಪಿ ಯಲಹಂಕ ವಲಯದ ವಿದ್ಯೂತ್ ಶಾಖೆ ವತಿಯಿಂದ ವಾರ್ಡ್ ವ್ಯಾಪ್ತಿಯಲ್ಲಿ ಹಾಳಾದ ವಿದ್ಯೂತ್ ದೀಪಗಳ ದುರಸ್ತಿ ಕಾರ್ಯವನ್ನು ಸರ್ಮಪಕವಾಗಿ ನಿರ್ವಹಿಸಲು ಮಾನ್ಯ ನೋಡಲ್ ಅಧಿಕಾರಿಗಳು ಸಮಬಂದಪಟ್ಟ ಅಭಿಯಂತರಿಗೆ ತಿಳಿಸಿದರು.

6. **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.**

- **ಶ್ರೀನಿವಾಸರಾವ ಅಮರಜ್ಯೋತಿನಗರ** ರವರು ಮಾತನಾಡಿ ನಾರಾಯಣಪುರ ಕ್ರಾಸ ಹತ್ತಿರ ಹೊಸದಾಗಿ ನಿರ್ಮಿಸಿರುವ ಮೇಲಸೇತುವ ಕೆಳಗೆ beautification ಕಾಮಗಾರಿ ಕೈಗೊಳ್ಳಬೇಕಾಗಿ, ಆಟೋಮೆಟಿಕ್ ಟ್ರಾಫೀಕ್ ಸಿಗ್ನಲ್‌ಗಳನ್ನು ಮರು ಸ್ಥಾಪಿಸಬೇಕು. ಮೇಲಸೇತುವ ಕೆಳಗೆ ಯಾವುದೇ ತರಹದ ಅಂಗಡಿಗಳನ್ನು ಇಡದಂತೆ ಕ್ರಮ ವಹಿಸಬೇಕಾಗಿ ಕೋರಿದರು. 2022-23 ನೇ ಸಾಲಿನ ಬಿ.ಬಿ.ಎಂ.ಪಿ ಬಜೆಟ್‌ನಲ್ಲಿ ವಾರ್ಡ್ ನಂ 06 ರಲ್ಲಿ ಅವಶ್ಯವಾಗಿರುವ ಮೂಲಸೌರ್ಕಯ ಕಾಮಗಾರಿಗಳಿಗೆ, ಶೌಚಾಲಯ ನಿರ್ಮಾಣ ಕುಡಿಯುವ ನೀರಿನ ಕಾ'ಮಗಾರಿಗಳಿಗೆ ಬೇಕಾಗುವ ಅವಶ್ಯಕ ಅನುದಾನವನ್ನು ನೀಡಲು ಪ್ರಸ್ಥಾವನೆಯನ್ನು ಕಳುಹಿಸಲು ಕೋರಿದರು. ಈ ವಾರ್ಡ್‌ನಲ್ಲಿ ಪ್ರಥಮವಾಗಿ ಗೂಗಲ್ ಮೀಟ್ ಆಪ್ ಮುಖಾಂತರ ವರ್ಚುವಲ್ ಸಭೆ ಆಯೋಜಿಸಿದ್ದು, ಇದರಿಂದಾಗಿ ಹೆಚ್ಚಿನ ಸಾರ್ವಜನಿಕರು ಮತ್ತು ಆರ.ಡಬ್ಲ್ಯೂಎ ಸದಸ್ಯರಿಗೆ ಅವರುಗಳ ಸಮಸ್ಯೆಗಳನ್ನು ಹೇಳಲು ತುಂಬ ಸಹಕಾರಿಯಾಗುತ್ತದೆ ಎಂದು ತಿಳಿಸಿದರು.
- **ಶ್ರೀ ದಾಸಪ್ಪ ಹೆಗಡೆನಗರ ರವರು** ಮತನಾಡಿ ಹೆಗಡೆನಗರದ ವೃತ್ತದ ಹತ್ತಿರ ಸಾರ್ವಜನಿಕರಿಗಾಗಿ ಮತ್ತು ವಿಶೇಷವಾಗಿ ಮಹಿಳೆಯರಿಗೆ ಯಾವುದೇ ಸಾರ್ವಜನಿಕ ಶೌಚಾಲಯ ವಿರುವುದಿಲ್ಲ. ಆದ್ದರಿಂದ ಕೂಡಲೇ ಶೌಚಾಲಯ ನಿರ್ಮಿಸಲು ಅಗತ್ಯ ಕ್ರಮ ವಹಿಸಲು ಕೋರಿದರು. ಚಿಕ್ಕಜಾಲ ಟ್ರಾಫೀಕ್ ಪೋಲಿಸ್ ಸ್ಟೇಷನ್ ಕಾಂಪೌಡ್ ಮುಂಭಾಗ ಘೂಟಪಾತ ಜಾಗದಲ್ಲಿ ಅಥವಾ ನಾರಾಯಣಪುರ ಕ್ರಾಸ್ ಹತ್ತಿರ ಮೇಲಸೇತುವ ಕೆಳಗೆ ಸಾರ್ವಜನಿಕ ಶೌಚಲಯ ನಿಮಿಸಬಹುದಾಗಿರುತ್ತದೆ ಎಂದು ತಿಳಿಸಿದರು.
- **ಶ್ರೀಮತಿ ಪೂರ್ಣಿಮಾ ಭೂವನೇಶ್ವರಿನ ನಗರ** ರವರು ಮಾತನಾಡಿ, ಭೂವನೇಶ್ವರಿ ನಗರದ ಅಡ್ಡರಸ್ತೆಗಳಿಗೆ ಮೇಟ್ ಮಿಕ್ಸ್ ಅಳವಡಿಸಿ ಸುಮಾರು ದಿನಗಳಾಗಿದ್ದು, ಸಾವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುವ ಕಾರಣ ಕೂಡಲ್ೇ ಡಾಂಬರೀಕರಣ ಕಾಮಗರಿ ಕೈಗೊಳ್ಳಲು ಕೊರಿದರು. ಭೂವನೇಶ್ವರಿನಗರದ 1ನೇ ಅಡ್ಡರಸ್ತೆಯಿಂದ 9ನೇ ಅಡ್ ರಸ್ತೆವರಗೆ ಬಾಕಿವಿರುವ ಒಳಚರಂಡಿ ಕಾಮಗಾರಿಯನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ಪೂರ್ಣಗೊಳಿಸಲು ಕ್ರಮ ವಹಿಸಬೇಕಾಗಿ ಕೋರಿದರು ಹಾಗೂ ಭೂವನೇಶ್ವರಿನಗರದ 10ನೇ 'ಎ' ಅಡ್ಡ ರಸ್ತೆಯಿಂದ 15 'ಎ' ನೇ ಅಡ್ಡರಸ್ತೆವರೆಗೆ ಬಾಕಿವಿರುವ ಒಳಚರಂಡಿ ಕಾಮಗಾರಿಯನ್ನು ಈಗಾಗಲೇ ಬಿ.ಡಬ್ಲ್ಯೂಎಸ್.ಎಸ್.ಬಿ. ಮತ್ತು ಬಿ.ಬಿ.ಎಂ.ಪಿ ಅಧಿಕಾರಿಗಳೊಂದಿಗೆ ಆರ.ಡಬ್ಲ್ಯೂಎ ಸದಸ್ಯರು ಪರಿಶೀಲಿಸಿದ್ದು, ಫೇಬ್ರವರಿ 28 ರವರಗೆ ಕಾಮಗಾರಿ ಪೂರ್ಣಗೊಳಿಸುವುದಾಗಿ ತಿಳಿಸಿರುವಂತೆ ಬಾಕಿವಿರುವ ಕಾಮಗಾರಿ ಪೂರ್ಣಗೊಳಿಲು ಕೋರಿದರು.
- **ಶ್ರೀ ರಾಘವೇಂದ್ರರಾವ ಅಧ್ಯಕ್ಷರು** ಎಮ್.ಎಸ್.ಆರ್. ನಾರ್ಥಸಿಟಿ ಆರ್. ರವರು ಮಾತನಾಡಿ, ಬಡಾವಣೆಯಲ್ಲಿ ಬಾಕಿವಿರುವ ಗುಂಡಿಗಳನ್ನು ಮುಚ್ಚಲು ಕೋರಿದರು. ಬಡಾವಣೆಗೆ ಸಂಪರ್ಕ ಕಲ್ಪಿಸುವ ರಸ್ತೆಯ ಜಂಕ್ಷನ ಹತ್ತಿರ ರಸ್ತೆ ಡಾಂಬರೀಕರಣ ಮಾಡಲು, 1ನೇ ಅಡ್ಡ ರಸ್ತೆಯಲ್ಲಿ ಹಿಟಾಚಿಯಿಂದ ಮಳೆ ನೀರು ಚರಂಡಿ ಹೂಳು ತೆಗೆದ ಕಾರಣ ರಸ್ತೆಯು ಹಾಳಾಗಿದ್ದು ಈ ರಸ್ತೆ ಡಾಂಬರೀಕರಣ ಮಾಡಲು, ಕಟ್ ಮಾಡಿರು ಮರದ ರಂಬೆಗಳನ್ನು ವಿಲೇವಾರಿ ಮಾಡಲು ಹಾಗೂ ಜಂಕ್ಷನ್ ಹತ್ತಿರ ಹೈ ಮಾಸ್ಟ್ ವಿದ್ಯೂತ್ ವ್ಯವಸ್ಥೆ ಮಾಡಲು ಕೋರಿದರು.

- **ಶ್ರೀಮತಿ ಡಿ. ಸೋಜಾ ಅನಾಮ ಎನಕ್ಲೇವ್** ಬಡಾವಣೆ ಆರ್.ಡಬ್ಲ್ಯೂ.ಎ ರವರು ಮಾತನಾಡಿ ಅನಾಮ ಎನಕ್ಲೇವ್ ಬಡಾವಣೆಯಲ್ಲಿ ಮನೆ ಮನೆಗಲಿಗೆ ಕಾವೇರಿ ನೀರನ ಸಮಪರ್ಕ ಒದಗಿಸಲು ಕೋರಿದರು.
- **ಶ್ರೀ ಮುನಿಸ್ವಾಮಿ ಡಿ.ಸಿ. ದಾಸರಹಳ್ಳಿ** ರವರು ಮತನಾಡಿ ದಾಸರಹಳ್ಳಿಯ ಆಕಾಶವಾಣಿ ಬಡಾವನೆ 9ನೇ ಅಡ್ಡರಸ್ತೆ ಯಲ್ಲಿ ಕುಡಿಯುವ ನೀರನ ಕೋಳವೆ ಬಾವಿ ದುರಸ್ತಿಯಲ್ಲಿದ್ದು, ಕೂಡಲೇ ದುರಸ್ತಿ ಪಡಿಸಿ ಸಾರ್ವಜನಿಕರಿಗೆ ಕುಡಿಯುವ ನೀರು ಒದಗಿಸಲು ಕ್ರಮ ವಹಿಸಲು ಕೊರದರು. ಹಾಗೂ ಬೇಸಿಗೆ ಪ್ರಾರಂಭವಾಗಿದ್ದರಿಂದ ಕೊಳವೆ ಬಾವಿಗಳಿಗೆ ಬೇಕಾಗುವ ಬಿಡಿಭಾಗಗಳನ್ನು ಶೇಖರಣೆ ಮಾಡಲು ಅಗತ್ಯ ಕ್ರಮ ವಹಿಸಲು ಕೋರದರು.
- **ಪ್ರಶಾಂತಿನಗರದ ಆರ್.ಡಬ್ಲ್ಯೂ.ಎ** ಸದಸ್ಯರು ಮತನಾಡಿ 1ರಿಂದ5 ನೇ ಅಡ್ಡ ರಸ್ತೆಗಳಲ್ಲಿ ರಸ್ತೆಗಳನ್ನು ಗುಡಿಸಲು ಯಾರು ಬರುತ್ತಿರುವುದಿಲ್ಲ. ಆದ್ದರಿಂದ ಸಂಬಂದಪಟ್ಟ ಅಧಿಕಾರಿಗಳು ಸೂಕ್ತ ಕ್ರಮವಹಿಸಲು ಕೋರಿದರು.
- **ಶ್ರೀ ರಾಜಗೋಪಲ್ ರವರು** ಭಾಗ್ಯಶ್ರೀ ಬಡಾವಣೆ ನಿವಾಸಿ ರವರು ಮಾತನಾಡಿ ಭಾಗ್ಯಶ್ರೀ ಬಡಾವಣೆಯಲ್ಲಿ ಸರ್ಕಾರಿ ಜಾಗವಿದ್ದು ಈ ಜಾಗವನ್ನು ಬಿ.ಬಿ.ಎಂ.ಪಿ ರವರು ವಶಕ್ಕೆ ಪಡೆದುಕೊಳ್ಳಬೇಕಾಗಿ ಹಾಗೂ ಬಿ.ಡಿ.ಎ ಬಡಾವಣೆಯಿಂದ ಚರಂಡಿಗೆ ಕೋಳಚೆ ನೀರು ಬರುತ್ತಿದ್ದು ಪರಿಶೀಲಿಸಿ ಕ್ರಮವಹಿಸಲು ಕೋರದರು.
- **ಸಾರ್ವಜನಿಕರು ಮಾತನಾಡಿ** ಥಣಿಸಂದ್ರ ಮುಖ್ಯ ರಸ್ತೆಯಲ್ಲಿ ಪೂವಂಕಾರ Atmosphere ಪ್ರಾಜೇಕ್ಟ್ ಪಕ್ಕದಲ್ಲಿ ಥಣಿಸಂದ್ರ ಗ್ರಾಮದ ಸರ್ವೇ ನಂ 85 ರಲ್ಲಿ ಸರ್ಕಾರಿ ಜಾಗವಿದ್ದು, ಮಕ್ಕಳಿಗೆ ಆಟವಾಡಲು ಯಾವುದೇ ಆಟದ ಮೈದಾನ ಇಲ್ಲದೇ ಇರುವುದರಿಂದ ಸರ್ಕಾರಿ ಜಾಗವನ್ನು ಆಟದ ಮೈದಾನಕ್ಕೆ ಕಾಯ್ದಿಸರಬೇಕಾಗಿ ಹಾಗೂ ಸರ್ಕಾರಿ ಜಾಗವನ್ನು ಬಿ.ಬಿ.ಎಂ.ಪಿ ಗೆ ಹಸ್ತಾಂತರಿಸಲು ಸಂಬಂದಪಟ್ಟ ತಹಸೀಲ್ದಾರ್ ರವರಿಗೆ ಪತ್ರ ಬರೆದು ಕೋರಬೇಕಾಗಿ ತಿಳಿಸಿದರು.

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು, ವಾರ್ಡ್ ಸಮಿತಿರವರು ಮಾತನಾಡಿ ಈವರೆಗೂ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರೀಗಣಿಸಿ ಎಲ್ಲಾ ದೂರು ಮತ್ತು ಸಲಹೆ ಮತ್ತು ಸೂಚನೆಗಳನ್ನು ಕಾರ್ಯರೂಪಕ್ಕೆ ತರಲು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಅಗತ್ಯಕ್ರಮ ಕೈಗೊಳ್ಳುವಂತೆ ಸೂಚಿಸುತ್ತಾ ಗೂಗಲ್ ಮೀಟ್ ಆಪ್ ಮುಖಾಂತರ ವರ್ಚುವಲ್ ಸಭೆಗೆ ಹಾಜರಾಗಿದ್ದ ಎಲ್ಲಾ ಅಧಿಕಾರಿಗಳಿಗೆ ಹಾಗೂ ವಿವಿಧ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಹಾಜರಾಗಿರುವ ಸಾರ್ವಜನಿಕರಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

05/02/2022

**ಕಾರ್ಯದರ್ಶಿ**
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 06, (ಥಣಿಸಂದ್ರ)

**ನೋಡಲ್ ಅಧಿಕಾರಿಗಳು**
ವಾರ್ಡ್ ಸಮಿತಿ, ವಾರ್ಡ್ ನಂ. 06(ಥಣಿಸಂದ್ರ)
ಹಾಗೂ ಸ.ಕಾ.ಅ ಬ್ಯಾಟರಾಯನುರ ಉಪ ವಿಭಾಗ

ಪ್ರತಿಯನ್ನು.

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂಧ್ರ ಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಅಪರ ಆಯುಕ್ತರು, ಯಲಹಂಕ ವಲಯ ರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯ ಅಭಿಯಂತರರು, ಯಲಹಂಕ ವಲಯ ರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.